# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 946
2) ಸದಸ್ಯರ ಹೆಸರು : ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 13-12-2023
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಮೀನುಮರಿ ಉತ್ಪಾದನಾ ಕೇಂದ್ರಗಳಿಗೆ ಸೌರ ವಿದ್ಯುತ್ ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಯಾವ ಕೇಂದ್ರಗಳಲ್ಲಿ ಅಳವಡಿಸಲಾಗಿದೆ; ಸೌರ ವಿದ್ಯುತ್ ಅಳವಡಿಸಲು ತಗುಲಿರುವ ವೆಚ್ಚವೆಷ್ಟು; ಎಷ್ಟು ಪ್ರಮಾಣದ ಸೌರ ವಿದ್ಯುತ್ ಬಳಸಲಾಗುತ್ತಿದೆ ಹಾಗೂ ಸೌರ ವಿದ್ಯುತ್ ಅಳವಡಿಕೆಯಿಂದ ಆದ ಉಳಿತಾಯದ ವಿವರ ಒದಗಿಸುವುದು; | ಸೌರ ವಿದ್ಯುತ್ ಅಳವಡಿಸಲಾಗಿರುವ ಕೇಂದ್ರಗಳ ಹೆಸರು, ಅಳವಡಿಸಲು ತಗುಲಿರುವ ವೆಚ್ಚ, ಎಷ್ಟು ಪ್ರಮಾಣದ ಸೌರ ವಿದ್ಯುತ್ ಬಳಕೆ ಹಾಗೂ ಸೌರ ವಿದ್ಯುತ್ ಅಳವಡಿಕೆಯಿಂದ ಆದ ಉಳಿತಾಯದ ವಿವರಗಳನ್ನು **<u>ಅನುಬಂಧ-1</u>** ರಲ್ಲಿ ನೀಡಲಾಗಿದೆ. |
| ಇ) | ರಾಜ್ಯದಲ್ಲಿ ಸರ್ಕಾರದಿಂದ ಅನುಮತಿಸಲಾದ ಎಫ್ ಪಿಓಗಳ ಸಂಖ್ಯೆ ಎಷ್ಟು; ಇದರ ಉದ್ದೇಶ ಏನು; ಇವುಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಹಾಗೂ ಸದರಿ ಸಂಸ್ಥೆಗಳು ಕೈಗೊಳ್ಳುತ್ತಿರುವ ಕಾರ್ಯಚಟುವಟಿಕೆಗಳು ಯಾವುವು; (ಎಫ್ ಪಿಓ ವಾರು ವಿವರ ನೀಡುವುದು) | ರಾಜ್ಯದಲ್ಲಿ ಸರ್ಕಾರದಿಂದ ಮೀನುಗಾರಿಕೆ ಇಲಾಖೆಗೆ 2021-22ನೇ ಸಾಲಿಗೆ 25 ಎಫ್.ಪಿ.ಓ.ಗಳನ್ನು, 2022-23 ನೇ ಸಾಲಿಗೆ 25 ಎಫ್.ಪಿ.ಓ.ಗಳನ್ನು ಹಾಗೂ 2023-24 ನೇ ಸಾಲಿಗೆ 25 ಎಫ್.ಪಿ.ಓ.ಗಳನ್ನು ಹೀಗೆ ಒಟ್ಟು 75 ಎಫ್.ಪಿ.ಓ.ಗಳನ್ನು ನೋಂದಣಿ ಮಾಡುವಂತೆ ಗುರಿ ನಿಗಧಿಪಡಿಸಿ ಅನುಮತಿಸಲಾಗಿದೆ.<br><br>ಅದರಂತೆ, 2021-22ನೇ ಸಾಲಿಗೆ 57 ಎಫ್.ಪಿ.ಓ.ಗಳನ್ನು, 2022-23 ನೇ ಸಾಲಿಗೆ 05 ಎಫ್.ಪಿ.ಓ.ಗಳನ್ನು ಒಟ್ಟು 62 ಎಫ್.ಪಿ.ಓ.ಗಳನ್ನು ಇದುವರೆಗೂ ನೋಂದಣಿ ಮಾಡಲಾಗಿದ್ದು, ಬಾಕಿ ಉಳಿದ 13 ಎಫ್.ಪಿ.ಓ.ಗಳನ್ನು 2023-24 ನೇ ಸಾಲಿಗೆ ನೋಂದಣಿ ಮಾಡಲು ಕ್ರಮವಹಿಸಲಾಗಿರುತ್ತದೆ.<br><br>ಎಫ್.ಪಿ.ಓ.ಗಳ ಉದ್ದೇಶಗಳ ಮಾಹಿತಿಯನ್ನು **<u>ಅನುಬಂಧ-2</u>** ರಲ್ಲಿ ನೀಡಲಾಗಿದೆ<br><br>ಎಫ್.ಪಿ.ಓ.ಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಹಾಗೂ ಸದರಿ ಸಂಸ್ಥೆಗಳು ಕೈಗೊಳ್ಳುತ್ತಿರುವ ಕಾರ್ಯ ಚಟುವಟಿಕೆಗಳ ವಿವರವನ್ನು **<u>ಅನುಬಂಧ-3</u>** ರಲ್ಲಿ ನೀಡಲಾಗಿದೆ. |

<table>
<tr>
<td>ಈ)</td>
<td>ಎಫ್.ಪಿ.ಓ ಹಾಗೂ ಮೀನುಗಾರರ ಸಹಕಾರ ಸಂಘಗಳ ಕಾರ್ಯ ಚಟುವಟಿಕೆಗಳು ಅತಿಕ್ರಮಣ ವಾಗದಂತೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ;<br>(ಮಾಹಿತಿ ನೀಡುವುದು)</td>
<td>ಮೀನುಗಾರರ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿರುತ್ತವೆ ಹಾಗೂ ರೈತ ಉತ್ಪಾದಕ ಸಂಸ್ಥೆಗಳು ಕಂಪನಿ ಕಾಯ್ದೆ 1959 ರಡಿ ನೋಂದಣಿಗೊಂಡು ಕಾರ್ಯ ನಿರ್ವಹಿಸುತ್ತಿರುತ್ತವೆ. ಆದರೆ, ಇಲಾಖೆ ಕೆರೆಗಳನ್ನು ನೇರ ಗುತ್ತಿಗೆ ನೀಡುವ ಸಂದರ್ಭದಲ್ಲಿ ಮೀನುಗಾರರ ಸಹಕಾರ ಸಂಘಗಳಿಗೆ ಮೊದಲ ಆದ್ಯತೆ ನೀಡಿ ನಂತರದಲ್ಲಿ ರೈತ ಉತ್ಪಾದಕ ಸಂಸ್ಥೆಗಳಿಗೆ ನೀಡಲು ಇಲಾಖೆಯಿಂದ ಕ್ರಮವಹಿಸಲಾಗುತ್ತಿದೆ.</td>
</tr>
<tr>
<td>ಉ)</td>
<td>ಸರ್ಕಾರವು ಇದುವರೆಗೂ ನೀಡಿರುವ ಕಿಸಾನ್ ಕ್ರೆಡಿಟ್ ಕಾರ್ಡ್ ಫಲಾನುಭವಿಗಳ ವಿವರ ಹಾಗೂ ಕೈಗೊಳ್ಳುತ್ತಿರುವ ಚಟುವಟಿಕೆಗಳ ಕುರಿತು ಜಿಲ್ಲಾವಾರು ಮಾಹಿತಿ ನೀಡುವುದು;</td>
<td>ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು ವಿತರಿಸುವ ಕುರಿತಂತೆ ಸರ್ಕಾರದಿಂದ ಅನುಮತಿಸಿದ ವಿವಿಧ 15 ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮೀನು ಕೃಷಿಕರು ನೇರವಾಗಿ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಅವರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿವಿಧ ಬ್ಯಾಂಕುಗಳಿಂದ ವಿತರಿಸಲಾಗುತ್ತಿದೆ. ಈ ರೀತಿ ಮೀನು ಕೃಷಿಕರು ನೇರವಾಗಿ ಅರ್ಜಿಗಳನ್ನು ಇಲಾಖೆಯ ಮುಖಾಂತರವಾಗಲೀ ಅಥವಾ ಯಾವುದೇ Portal ಮುಖಾಂತರ ಸಲ್ಲಿಸದೇ ಇರುವುದರಿಂದ ಫಲಾನುಭವಿ ಗಳ ವಿವರಗಳು ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಆದರೂ ಸಹ ಇದುವರೆಗೂ ವಿತರಿಸಲಾದ ಕಿಸಾನ್ ಕ್ರೆಡಿಟ್ ಕಾರ್ಡ್ ಗಳ ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ (ಮಾಹಿತಿ SLBC ನಡವಳಿ).
<table>
<tr><th>ವರ್ಷ</th><th>ಕಿಸಾನ್ ಕ್ರೆಡಿಟ್ ಕ ರ್ಡ್ ಪಡೆದಿರುವ ಫಲಾನುಭವಿಗಳ ಸಂಖ್ಯೆ</th><th>ಮಂಜೂರಾದ ಮೊತ್ತ ರೂ. ಕೋಟಿಗಳಲ್ಲಿ)</th></tr>
<tr><td>2021-22</td><td>3239</td><td>31.33</td></tr>
<tr><td>2022-23</td><td>12729</td><td>44.10</td></tr>
<tr><td>2023-24</td><td>19114</td><td>282.40</td></tr>
</table>
ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು ಯಾವ ಮೀನುಗಾರಿಕೆ ಚಟುವಟಿಕೆಗಳಿಗೆ ವಿತರಿಸಲಾಗುತ್ತಿದೆ ಎಂಬ ಮಾಹಿತಿಯನ್ನು <u>ಅನುಬಂಧ-4</u> ರಲ್ಲಿ ನೀಡಲಾಗಿದೆ.</td>
</tr>
</table>

| | | |
|---|---|---|
| ಊ | ಮೀನುಗಾರ / ಮೀನು ಕೃಷಿಕರ ಎಷ್ಟು ಮಕ್ಕಳಿಗೆ ವಿದ್ಯಾನಿಧಿ ಯೋಜನೆಯಡಿ ಶಿಷ್ಯ ವೇತನ ನೀಡಲಾಗಿದೆ; (ಶಿಷ್ಯವೇತನ ಪಡೆದವರ ಜಿಲ್ಲಾವಾರು ಮಾಹಿತಿ ನೀಡುವುದು) | ಮೀನುಗಾರ / ಮೀನು ಕೃಷಿಕರ ಮಕ್ಕಳಿಗೆ ವಿದ್ಯಾನಿಧಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ 858 ವಿದ್ಯಾರ್ಥಿಗಳಿಗೆ ರೂ. 44.60 ಲಕ್ಷ ವಿದ್ಯಾರ್ಥಿವೇತನ ಪಾವತಿಸಲಾಗಿದೆ ಹಾಗೂ ಶಿಷ್ಯವೇತನ ಪಡೆದವರ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-5** ರಲ್ಲಿ ನೀಡಲಾಗಿದೆ. |
| ಋ | ವಿದ್ಯಾನಿಧಿ ಯೋಜನೆ ಕುಂಠಿತವಾಗಲು ಕಾರಣವೇನು; ಯೋಜನೆಯ ಸರಿಯಾದ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ವಿದ್ಯಾನಿಧಿ ಯೋಜನೆಯನ್ನು 2022-23 ನೇ ಸಾಲಿನಿಂದ ರಾಜ್ಯದ ಮೀನುಗಾರರ / ಮೀನು ಕೃಷಿಕರ ಮಕ್ಕಳಿಗೂ ವಿಸ್ತರಿಸಿ ಆದೇಶಿಸಲಾಗಿದೆ. State Scholarship Portal ನಿಂದ ಇಲಾಖೆಯ ಲಾಗಿನ್‌ಗೆ ಬರುವ ಮೀನುಗಾರರ ಮಕ್ಕಳ ಮಾಹಿತಿ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ವಿದ್ಯಾರ್ಥಿ ವೇತನವನ್ನು ಪಾವತಿಸಲಾಗುತ್ತಿದೆ. |

ಸಂಖ್ಯೆ: ಪಸಂಮೀ ಇ-217 ಮೀಇಯೋ 2023

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

**ಅನುಬಂಧ-1**

**ಮೀನುಮರಿ ಉತ್ಪಾದನಾ ಕೇಂದ್ರಗಳಿಗೆ ಸೌರ ವಿದ್ಯುತ್ ಅಳವಡಿಸುವ ಬಗ್ಗೆ. ಪ್ರಶ್ನೆ ಸಂಖ್ಯೆ 743**

| ಕ್ರ ಸಂ | ಕೇಂದ್ರದ ಹೆಸರು | ಸೌರ ವಿದ್ಯುತ್ ಅಳವಡಿಸಲು ತಗುಲಿರುವ ವೆಚ್ಚ | ಎಷ್ಟು ಪ್ರಮಾಣದ ಸೌರ ವಿದ್ಯುತ್ ಬಳಸಲಾಗುತ್ತಿದೆ | ಅಳವಡಿಕೆಯಿಂದ ಉಳಿತಾಯದ ವಿವರ |
|---|---|---|---|---|
| 1 | ನುಗು ಮೀನುಮರಿ ಕೇಂದ್ರ, ಸರಗೂರು, ಮೈಸೂರು ಜಿಲ್ಲೆ | 70.67 ಲಕ್ಷ | 10 KW | ಸೌರ ವಿದ್ಯುತ್ ಅಳವಡಿಕೆಯಿಂದಾಗಿ ವರ್ಷಕ್ಕೆ ರೂ 0.96 ಲಕ್ಷ ರಂತೆ ತಿಂಗಳಿಗೆ 0.08 ಲಕ್ಷ ಉಳಿತಾಯವಾಗುತ್ತಿದೆ. |
| 2 | ಕಬಿನಿ ಮೀನುಮರಿ ಕೇಂದ್ರ, ಹೆಚ್.ಡಿ.ಕೋಟೆ, ಮೈಸೂರು ಜಿಲ್ಲೆ | 74.00 ಲಕ್ಷ | 2KW | ಸೌರ ವಿದ್ಯುತ್ ಅಳವಡಿಕೆಯಿಂದಾಗಿ ವರ್ಷಕ್ಕೆ ರೂ 0.60 ಲಕ್ಷ ಉಳಿತಾಯವಾಗಿದೆ. |
| 3 | ಬಂದ್ ಬ್ರೀಡಿಂಗ್, ಬಿ.ಆರ್ ಪ್ರಾಜೆಕ್ಟ್, ಶಿವಮೊಗ್ಗ ಜಿಲ್ಲೆ | 77.92 ಲಕ್ಷ | 5KW | ಸೌರ ವಿದ್ಯುತ್ ಅಳವಡಿಕೆಯಿಂದಾಗಿ ವರ್ಷಕ್ಕೆ ರೂ 2.16 ಲಕ್ಷ ರಂತೆ ತಿಂಗಳಿಗೆ 0.18 ಲಕ್ಷ ಉಳಿತಾಯವಾಗಿದೆ. |
| 4 | ರಾಷ್ಟ್ರೀಯ ಮೀನುಮರಿ ಕೇಂದ್ರ, ಬಿ.ಆರ್ ಪ್ರಾಜೆಕ್ಟ್, ಶಿವಮೊಗ್ಗ ಜಿಲ್ಲೆ | 41.43 ಲಕ್ಷ | 30 KW | ಸೌರ ವಿದ್ಯುತ್ ಅಳವಡಿಕೆಯಿಂದಾಗಿ ವರ್ಷಕ್ಕೆ ರೂ 0.90 ಲಕ್ಷ ರಂತೆ ತಿಂಗಳಿಗೆ 0.075 ಲಕ್ಷ ಉಳಿತಾಯವಾಗಿದೆ. |

***

## ಅನುಬಂಧ – 02

### ಪ್ರಶ್ನೆ ಸಂಖ್ಯೆ 743

### ಎಫ್.ಪಿ.ಒ ಗಳ ಮುಖ್ಯ ಉದ್ದೇಶಗಳು

1) ಗ್ರಾಮ ಮಟ್ಟದಲ್ಲಿ ಸುಮಾರು 20 ಸದಸ್ಯರನ್ನೊಳಗೊಂಡ ರೈತ ಆಸಕ್ತ ಗುಂಪುಗಳಾಗಿ ರಚಿಸುವುದು. ಈ ರೈತ ಆಸಕ್ತ ಗುಂಪುಗಳನ್ನು ಒಕ್ಕೂಟ ರೂಪದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಾಗಿ ಕಟ್ಟುವ ಮೂಲಕ ಉತ್ಪನ್ನ ಆಧಾರಿತ ಗುಚ್ಛ ಅಥವಾ ವಾಣಿಜ್ಯ ಬೆಳೆಗಳ ಕಾಲಾವಧಿಯಲ್ಲಿ ಸೂಕ್ತ ಉತ್ಪನ್ನ ಆಧಾರಿತ ಯೋಜನೆಯನ್ನು ಮಾಡಿ ಅನುಷ್ಠಾನಗೊಳಿಸುವುದು.
2) ರೈತರ ಸಾಮರ್ಥ್ಯಗಳನ್ನು ಉತ್ತಮ ಬೇಸಾಯ ಪದ್ಧತಿಗಳ ಬಗ್ಗೆ ತರಬೇತಿ ನೀಡುವ ಮೂಲಕ ಬಲಪಡಿಸುವುದು ಮತ್ತು ಸಕಾಲದಲ್ಲಿ ನಿರಂತರವಾಗಿ ಗುಣಮಟ್ಟದ ಪರಿಕರಗಳನ್ನು ಹಾಗೂ ಸೇವೆಗಳನ್ನು ಪಡೆಯಲು ಸಂಪರ್ಕ ಕಲ್ಪಿಸುವುದು. ಅದರೊಂದಿಗೆ ಹಣಕಾಸು ಸಾಲ ಸೌಲಭ್ಯ ಮತ್ತು ಕೃಷಿ ಬೆಳೆ ವಿಮೆ ಸೇವೆಗಳನ್ನು ಕಲ್ಪಿಸುವ ಮೂಲಕ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು ಹಾಗೂ ಗುಚ್ಛಮಟ್ಟದಲ್ಲಿ ಸ್ಪರ್ಧಾತ್ಮಕಥೆಯನ್ನು ಹೆಚ್ಚಿಸುವುದಾಗಿದೆ.
3) ನ್ಯಾಯೋಚಿತ ಹಾಗೂ ಲಾಭದಾಯಕ ಮಾರುಕಟ್ಟೆಗಳಿಗೆ ಸಂಪರ್ಕ ಕಲ್ಪಿಸುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಗಳನ್ನು ವಿವಿಧ ಮಾರುಕಟ್ಟೆಗಳ ಅವಕಾಶಗಳೊಂದಿಗೆ ಸಂಬಂಧ ಕಲ್ಪಿಸುವುದು.
4) ರೈತ ಉತ್ಪಾದಕರ ಸಂಸ್ಥೆಗಳಿಗೆ ಸಾಮರ್ಥ್ಯ ವರ್ಧನೆಯಲ್ಲಿ ಸಾಂಸ್ಥಿಕ ಬೆಂಬಲ ನೀಡುವುದು ಹಾಗೂ ಅವುಗಳಿಗೆ ಮುನ್ನಡೆಯಲು ಸಹಾಯ ಕಲ್ಪಿಸುವುದು.
5) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸಮನ್ವಯ ತರಲು ಸಾಮಾನ್ಯ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಪರಿಣಾಮಕಾರಿ ಅನುಷ್ಠಾನ ಹಾಗೂ ಕಾರ್ಯ ನಿರ್ವಹಿಸುವಿಕೆಯನ್ನು ತರುವಂತೆ ಮಾಡುವುದು.
6) ಮಾಹಿತಿ, ಉತ್ಪನ್ನಗಳು ಮತ್ತು ಸೇವೆಗಳನ್ನು ರೈತ ಉತ್ಪಾದಕರ ಸಂಸ್ಥೆಗಳು ಮತ್ತು ಇತರ ಪಾಲುದಾರರೊಂದಿಗೆ ಸರಬರಾಜು ಮತ್ತು ಮಾರುಕಟ್ಟೆ ಸರಪಳಿಯ ಮೂಲಕ ವ್ಯವಹಾರ ಸಂಪರ್ಕ ಕಲ್ಪಿಸುವ ಅಥವಾ ವಿನಿಮಯ ಮಾಡಿಕೊಳ್ಳುವ ವೇದಿಕೆಯನ್ನು ಕಲ್ಪಿಸುವುದು.
7) ರೈತ ಉತ್ಪಾದಕರ ಸಂಸ್ಥೆಗಳ ಉಸ್ತುವಾರಿ ಹಾಗೂ ಮೌಲ್ಯಮಾಪನಕ್ಕೆ ಮಾರ್ಗದರ್ಶನ ನೀಡುವುದು.

***

ಅನುಬಂಧ-03

ಕರ್ನಾಟಕ ವಿಧಾನ ಪರಿಷತ್ತು ಪ್ರಶ್ನೆ ಸಂಖ್ಯೆ: 743 (946)

FPO ಗಳು ಕೈಗೊಂಡಿರುವ ಮೀನುಗಾರಿಕೆಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳ ವಿವರ

| ಕ್ರ.ಸಂ | ಜಿಲ್ಲೆ | ಎಫ್.ಪಿ.ಒ. ಹೆಸರು | ಸರ್ಕಾರದಿಂದ ಬಿಡುಗಡೆಯಾದ ಅನುದಾನ(ರೂ. ಲಕ್ಷಗಳಲ್ಲಿ) | FPOಗಳು ಕೈಗೊಂಡಿರುವ ಕಾರ್ಯಚಟುವಟಿಕೆಗಳ ವಿವರ | | |
|---|---|---|---|---|---|---|
| | | | | 1 | 2 | 3 |
| 1 | ಬಾಗಲಕೋಟೆ | ಒಳನಾಡು ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 12.0054 | ಮೀನು ಖರೀದಿ ಮತ್ತು ಮಾರಾಟ | | |
| 2 | ಬಾಗಲಕೋಟೆ | ಮತ್ಸ್ಯಗಂಗಾ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 13.6594 | ಮೀನು ಖರೀದಿ ಮತ್ತು ಮಾರಾಟ | ಹರಿಗೋಲು ಮಾರಾಟ | |
| 3 | ಬೆಂಗಳೂರು (ಗ್ರಾಮಾಂತರ) | ತಿಲಾಪಿಯಾ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 8.6964 | ಮೀನು ಖರೀದಿ ಮತ್ತು ಮಾರಾಟ | ಮೀನುಗಾರಿಕೆ ಚಟುವಟಿಕೆ, ಕೆರೆಗಳಲ್ಲಿ ಮೀನು ಹಿಡಿಯುವುದು | |
| 4 | ಬೆಂಗಳೂರು (ನಗರ) | ಶ್ರೀ ಮತ್ಸ್ಯ ಸಂಪದ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 10.2974 | ಕೆರೆಗಳ ಗುತ್ತಿಗೆ ಮತ್ತು ಮೀನುಗಾರಿಕೆ ಅಭಿವೃದ್ಧಿ | | ಮೀನು ಮಾರಾಟ |
| 5 | ಬೆಂಗಳೂರು (ನಗರ) | ಶ್ರೀ ಮತ್ಸ್ಯ ಸಮೃದ್ಧಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 10.2974 | ಕೆರೆಗಳ ಗುತ್ತಿಗೆ ಮತ್ತು ಮೀನುಗಾರಿಕೆ ಅಭಿವೃದ್ಧಿ | ಮತ್ಸ್ಯವಾಹಿನಿ ಯೋಜನೆಯಡಿ ಮೀನು ಮಾರಟ | ಅಕ್ವಮಾರ್ಟ್ ಘಟಕ ವನ್ನು ಸ್ಥಾಪಿಸಲು ಪ್ರಸ್ತಾವನೆಯಲ್ಲಿದೆ. |
| 6 | ಬೆಂಗಳೂರು (ನಗರ) | ಅಮೃತ್ ಅಕ್ವೇರಿಯಂ ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 9.196 | ಆಕ್ವೇರಿಯಂ ಮೀನುಮರಿಗಳನ್ನು ಮತ್ತು ಪರಿಕರಗಳನ್ನು ಮಾರಟ ಮಾಡಲು ಕ್ರಮವಹಿಸಲಾಗುತ್ತಿದೆ. | | |
| 7 | ಬೆಳಗಾವಿ | ವೇದಾಗಂಗಾ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 8.5404 | ಪಶು ಆಹಾರ ಖರೀದಿ ಮತ್ತು ಮಾರಾಟ | ಮೀನುಮರಿ ಖರೀದಿ ಮತ್ತು ಮಾರಾಟ | ಹೊರ ರಾಜ್ಯಗಳಿಗೆ ಮೀನು ಮಾರಾಟ |
| 8 | ಬೆಳಗಾವಿ | ಮಲಪ್ರಭಾ ವ್ಯಾಲಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 8.5404 | ರಸಗೊಬ್ಬರ ಖರೀದಿ ಮತ್ತು ಮಾರಾಟ | ಬಿತ್ತನೆ ಜೋಳದ ಬೀಜ ಖರೀದಿ ಮತ್ತು ಮಾರಾಟ | ಮೀನು ಖರೀದಿ ಮತ್ತು ಮಾರಾಟ |
| 9 | ಬಳ್ಳಾರಿ (ವಿಜಯನಗರ) | ತುಂಗಾಭದ್ರಾ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 4.756 | ಮೀನು ಹಿಡುವಳಿ ಹಾಗೂ ಸಾಗಾಣಿಕೆ ಮಾಡುವುದು | ಮಿನು ಮಾರಟ ಮಾಡುವುದು | ಕೆರೆಗಳನ್ನು ಗುತ್ತಿಗೆ ಪಡೆಯುವುದು |
| 10 | ಬಳ್ಳಾರಿ (ವಿಜಯನಗರ) | ಹಿರೇ ಬೊಮ್ಮಲಿಂಗೇಶ್ವರ ಸ್ವಾಮಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 4.756 | ಮೀನು ಹಿಡುವಳಿ ಹಾಗೂ ಸಾಗಾಣಿಕೆ ಮಾಡುವುದು | ಮಿನು ಮಾರಟ ಮಾಡುವುದು | ಕೆರೆಗಳನ್ನು ಗುತ್ತಿಗೆ ಪಡೆಯುವುದು |

| ಕ್ರ.ಸಂ | ಜಿಲ್ಲೆ | ಎಫ್.ಪಿ.ಒ. ಹೆಸರು | ಸರ್ಕಾರದಿಂದ ಬಿಡುಗಡೆಯಾದ ಅನುದಾನ(ರೂ. ಲಕ್ಷಗಳಲ್ಲಿ) | FPOಗಳು ಕೈಗೊಂಡಿರುವ ಕಾರ್ಯಚಟುವಟಿಕೆಗಳ ವಿವರ | | |
|---|---|---|---|---|---|---|
| | | | | 1 | 2 | 3 |
| 11 | ಬಳ್ಳಾರಿ | ಬಳ್ಳಾರಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 4.756 | ಮೀನು ಹಿಡುವಳಿ ಹಾಗೂ ಸಾಗಾಣಿಕೆ ಮಾಡುವುದು | ಮಿನು ಮಾರಟ ಮಾಡುವುದು | ಕೆರೆಗಳನ್ನು ಗುತ್ತಿಗೆ ಪಡೆಯುವುದು |
| 12 | ಬೀದರ್ | ಜಲಜೀವಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 14.996 | ಮೀನು ಖರೀದಿ ಮತ್ತು ಮಾರಾಟ | | |
| 13 | ವಿಜಯಪುರ | ಮುದ್ದೇಬಿಹಾಳ ಮ[illegible]ದ್ಯಮ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 9.747 | ಇದುವರೆಗೂ ಯಾವುದೇ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 14 | ಚಾಮರಾಜನಗರ | ಶ್ರೀ ಚಾಮರಾಜೇಶ್ವರ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 5.1774 | ಕೆರೆಗಳನ್ನು ಗುತ್ತಿಗೆ ಪಡೆದು ಅಭಿವೃದ್ಧಿ ಪಡಿಸಲಾಗುತ್ತಿದೆ | ಮೀನುಮರಿ ಖರೀದಿ ಮತ್ತು ಮಾರಾಟ | |
| 15 | ಚಾಮರಾಜನಗರ | ಮಹದೇಶ್ವರ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 4.8284 | ಮೀನು ಖರೀದಿ ಮತ್ತು ಮಾರಾಟ | | |
| 16 | ಚಿಕ್ಕಬಳ್ಳಾಪುರ | ಸ್ಕಂದ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 6.7874 | ಮೀನುಮರಿ ಪಾಲನಾ ಕೇಂದ್ರ ನಿರ್ಮಿಸಿದ್ದು, ಪಾಲನೆ ಕೈಗೊಳ್ಳಲಾಗಿದೆ. | ಕೆರೆಗಳನ್ನು ಗುತ್ತಿಗೆ ಪಡೆದು ಅಭಿವೃದ್ಧಿ ಪಡಿಸಲಾಗುತ್ತಿದೆ, | |
| 17 | ಚಿಕ್ಕಬಳ್ಳಾಪುರ | ಗೌರಿಬಿದನೂರು ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 6.366 | ಇದುವರೆಗೂ ಯಾವುದೇ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 18 | ಚಿಕ್ಕಬಳ್ಳಾಪುರ | ಶ್ರೀ ಮತ್ಸ್ಯ ಪ್ರೇಮಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 6.0974 | ಮೀನುಮರಿ ಪಾಲನಾ ಕೇಂದ್ರ ನಿರ್ಮಿಸಿದ್ದು, ಪಾಲನೆ ಕೈಗೊಳ್ಳಲಾಗಿದೆ. | ಕೆರೆಗಳನ್ನು ಗುತ್ತಿಗೆ ಪಡೆದು ಅಭಿವೃದ್ಧಿ ಪಡಿಸಲಾಗುತ್ತಿದೆ, | |
| 19 | ಚಿಕ್ಕಮಗಳೂರು | ಮತ್ಸ್ಯಾಂಕುರ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 5.1774 | ಇಲಖಾ ವ್ಯಾಪ್ತಿಯ ಕೆರೆಯನ್ನು ಗುತ್ತಿಗೆ ಪಡೆದು ಮೀನುಗಾರಿಕೆ ಅಭಿವೃದ್ಧಿ ಮಾಡುತ್ತಿದ್ದಾರೆ | | |
| 20 | ಚಿಕ್ಕಮಗಳೂರು | ಮತ್ಸ್ಯವೃದ್ಧಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟಡ್ | 4.756 | ಪ್ರಸ್ತುತ ಯಾವುದೇ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 21 | ಚಿತ್ರದುರ್ಗ | ಕೋಟೆ ನಾಡು ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 6.0924 | ಇಲಾಖೆಯ ಕೆರೆಯನ್ನು ಗುತ್ತಿಗೆ ಮೂಲಕ ಪಡೆದುಕೊಂಡಿದ್ದು, ಮೀನು ಕೃಷಿ ಚಟುವಟಿಕೆ ನಡೆಸುತ್ತಿರುತ್ತಾರೆ | ಕೆರೆಯಲ್ಲಿ ಬೆಳೆದ ಮೀನು ಹಾಗೂ ಇತರ ಮೀನು ಸಂಗ್ರಹಿಸಿ ಮೀನು ಮಾರಾಟ ಚಟುವಟಿಕೆ ನಡೆಸುತ್ತಿರುತ್ತಾರೆ | |
| 22 | ದಕ್ಷಿಣಕನ್ನಡ | ಪುತ್ತೂರು ಮುತ್ತು ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 8.801 | ಟಾರ್ಪಾಲ್ ಮಾರಾಟ | ಒಳನಾಡು ಹಸಿ ಮೀನು ಮಾರಾಟ | |

| ಕ್ರ.ಸಂ | ಜಿಲ್ಲೆ | ಎಫ್.ಪಿ.ಒ. ಹೆಸರು | ಸರ್ಕಾರದಿಂದ ಬಿಡುಗಡೆಯಾದ ಅನುದಾನ(ರೂ. ಲಕ್ಷಗಳಲ್ಲಿ) | FPOಗಳು ಕೈಗೊಂಡಿರುವ ಕಾರ್ಯಚಟುವಟಿಕೆಗಳ ವಿವರ | | |
|---|---|---|---|---|---|---|
| | | | | 1 | 2 | 3 |
| 23 | ದಕ್ಷಿಣಕನ್ನಡ | ಮತ್ಸ್ಯನಾಡು ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 4.756 | ಇದುವರೆಗೂ ಯಾವುದೇ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 24 | ದಕ್ಷಿಣಕನ್ನಡ | ಮಹಶೀರ್ ಮತ್ಸ್ಯ ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 8.801 | ಮೀನುಮರಿಗಳ ಪೂರೈಕೆ | ಅಡಿಕೆ ಮಾರಾಟ | |
| 25 | ದಕ್ಷಿಣಕನ್ನಡ | ಮೊಗವೀರ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 4.756 | ಇದುವರೆಗೂ ಯಾವುದೇ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 26 | ದಾವಣಗೆರೆ | ದಾವಣಗೆರೆ ಮೀನುಗಾರಿಕೆ ಅಮೃತ ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 5.98 | ಮೀನುಗಾರರು/ಮೀನುಕೃಷಿಕರಿಂದ ಮೀನು ಖರೀದಿಸಿ ಸಂಸ್ಕರಿಸಿ ಮಾರಾಟ ಮಾಡುವುದು | ಮೀನುಮರಿ ಉತ್ಪಾದನೆ/ ಪಾಲನೆ ಕೈಗೊಳ್ಳುವುದು. | ಮೀನುಗಾರರು/ ಮೀನುಕೃಷಿಕರಿಗೆ ಅಗತ್ಯವಿರುವ ಪರಿಕರಗಳ ಮಾರಾಟ ಮಾಡುವುದು. |
| 27 | ದಾರವಾಡ | ದಾರವಾಡ ಮಿಶ್ರೀಕೋಟೆ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 6.0974 | ಕೆರೆಗಳನ್ನು ಇಲಾಖೆಯಿಂದ ಗುತ್ತಿಗೆ ಮೂಲಕ ಪಡೆದು ಮೀನುಮರಿ ಬಿತ್ತನೆ ಮಾಡಿರುತ್ತಾರೆ | | |
| 28 | ಗದಗ | ಶ್ರೀ ಗಂಗಾಮಾತೆ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 5.1774 | ಮೀನು ಹಿಡುವಳಿ ಮತ್ತು ತಾಜಾ ಮೀನು ಮಾರಾಟ | | |
| 29 | ಗದಗ | ಶ್ರೀ ಗೊರ್ ಶೆನ್ನ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 4.756 | ಇದುವರೆಗೂ ಯಾವುದೇ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 30 | ಕಲಬುರಗಿ | ಶ್ರೀ ಸಾಯಿ ರಾಘವೇಂದ್ರ ಕಲುಬುರಗಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 12.6324 | ಮೀನುಮರಿ ಪಾಲನೆ | ಮೀನು ಸಾಕಾಣಿಕೆ ಮತ್ತು ಮೀನು ಮಾರಾಟ | ಕೆರೆಗಳನ್ನು ಗುತ್ತಿಗೆ ಪಡೆದು ಅಭಿವೃದ್ಧಿ ಪಡಿಸಲಾಗುತ್ತಿದೆ |
| 31 | ಹಾಸನ | ಅನೇಕೆರೆ ಮೀನುಗಾರಿಕೆ ಉತ್ಪಾದಕರ ಕಂಪನಿ ಲಿಮಿಟೆಡ್ | 8.275 | ಮೀನುಮಾರಾಟ ಮಳಿಗೆ | ಚನ್ನರಾಯಪಟ್ಟಣ ತಾಲ್ಲೂಕಿನ ದಿಡಗ ಕೆರೆಯನ್ನು ಗುತ್ತಿಗೆಯನ್ನು ಪಡೆಯಲಾಗಿದೆ. | |
| 32 | ಹಾಸನ | ಬಾಗೂರು ಮೀನುಗಾರಿಕೆ ಉತ್ಪಾದಕರ ಕಂಪನಿ ಲಿಮಿಟೆಡ್ | 8.6964 | ಮೀನುಮಾರಾಟ ಮಳಿಗೆ | ಸಿ.ಎಸ್.ಸಿ ಸೇವಾ ಕೇಂದ್ರವನ್ನು ತೆರೆಯಲಾಗಿದೆ. | |
| 33 | ಹಾವೇರಿ | ಬ್ಲೂ ಗೋಲ್ಡ್ ಅಕ್ವಾ ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 8.6963 | ಯಾವುದೇ ಕೆರೆಯನ್ನು ಗುತ್ತಿಗೆ ಪಡೆದಿರುವುದಿಲ್ಲ ಹಾಗೂ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 34 | ಹಾವೇರಿ | ಕಾರ್ಪ ಮೀನು ಉತ್ಪಾದಕರ ಕಂಪನಿ ಲಿಮಿಟೆಡ್ | 8.6963 | 2 ಕೆರೆಗಳ ಮೀನುಪಾಶುವಾರು ಹಕ್ಕನ್ನು ಗುತ್ತಿಗೆ ಮೂಲಕ ಪಡೆದುಕೊಂಡು ಮೀನುಗಾರಿಕೆ ಚಟುವಟಿಕೆ ನಡೆಸುತ್ತಿದ್ದಾರೆ. | | |
| 35 | ಕೊಡಗು | ವೀರನಾಡು ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 10.7664 | ತರಬೇತಿ | ಮೀನುಮರಿ ಮಾರಾಟ | ಮೀನು ಆಹಾರ ಮಾರಾಟ |

| ಕ್ರ.ಸಂ | ಜಿಲ್ಲೆ | ಎಫ್.ಪಿ.ಒ. ಹೆಸರು | ಸರ್ಕಾರದಿಂದ ಬಿಡುಗಡೆಯಾದ ಅನುದಾನ(ರೂ. ಲಕ್ಷಗಳಲ್ಲಿ) | FPOಗಳು ಕೈಗೊಂಡಿರುವ ಕಾರ್ಯಚಟುವಟಿಕೆಗಳ ವಿವರ | | |
|---|---|---|---|---|---|---|
| | | | | 1 | 2 | 3 |
| 36 | ಕೋಲಾರ | ಶ್ರೀ ಮತ್ಸ್ಯ ಮಿತ್ರ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 10.6524 | ಕೆರೆ ಮೀನುಪಾಶುವಾರು ಹಕ್ಕನ್ನು ಗುತ್ತಿಗೆ ಮೂಲಕ ಪಡೆದುಕೊಂಡು ಮೀನುಗಾರಿಕೆ ಚಟುವಟಿಕೆ ನಡೆಸುತ್ತಿದ್ದಾರೆ. | | ಬಲೆ ವ್ಯಾಪಾರ |
| 37 | ಕೋಲಾರ | ಸಪಲಮ್ಮ ದೇವಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 2.295 | ಮೀನು ಮಾರಾಟ | | |
| 38 | ಕೊಪ್ಪಳ | ಗಂಗಾವತಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 8.3474 | ಇಲಾಖಾ ಕೆರೆ/ನದಿಭಾಗವನ್ನು ಗುತ್ತಿಗೆ ಪಡೆದು ಮೀನು ಸಾಕಾಣಿಕೆ ಮತ್ತು ಮೀನು ಮಾರಾಟ ಮಾಡಲಾಗುತ್ತಿದೆ | ತಾಲ್ಲೂಕಿನಾದ್ಯಂತ ಮೀನು ಮಾರಾಟ ಮಾಡಲು ಕ್ರಮ ವಹಿಸಲಾಗುತ್ತಿದೆ | |
| 39 | ಮಂಡ್ಯ | ಕೆ.ಆರ್. ಸಾಗರ ಜಲಾಶಯ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 8.6964 | ಮೀನುಮರಿ ಪಾಲನೆ | ಬಲೆ, ಹರಿಗೋಲು ವ್ಯಾಪಾರ | ಕೆರೆ ಅಭಿವೃದ್ಧಿ |
| 40 | ಮಂಡ್ಯ | ಮಂಡ್ಯ ಮೀನುಗಾರಿಕೆ ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 5.9914 | ಕೆರೆಗಳನ್ನು ಗುತ್ತಿಗೆ ಪಡೆದು ಮೀನು ಹಿಡುವಳಿ ಮಾಡಲಾಗುತ್ತಿರುವುದು | ಮೀನಿನ ಮಾರಾಟ ಕೇಂದ್ರ ಸ್ಥಾಪಿಸಲು ಸಿದ್ಧತೆಗಳನ್ನು ಮಾಡಿಕೊಂಡಿದೆ | |
| 41 | ರಾಯಚೂರು | ಅಂಬಿಗರ ಚೌಡಯ್ಯ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 9.9164 | ಮೀನು ಹಿಡುವಳಿ ಮತ್ತು ಮೀನು ಮಾರಾಟ | ಜಲ ಸಂಪನ್ಮೂಲಗಳನ್ನು ಗುತ್ತಿಗೆ ಪಡೆದು ಮೀನುಗಾರಿಕೆ ಚಟುವಟಿಕೆ ಮಾಡುವುದು | |
| 42 | ರಾಯಚೂರು | ಜಲಕ್ರಾಂತಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 6.7374 | ಮೀನು ಹಿಡುವಳಿ ಮತ್ತು ಮೀನು ಮಾರಾಟ | ಜಲ ಸಂಪನ್ಮೂಲಗಳನ್ನು ಗುತ್ತಿಗೆ ಪಡೆದು ಮೀನುಗಾರಿಕೆ ಚಟುವಟಿಕೆ ಮಾಡುವುದು | |
| 43 | ಮೈಸೂರು | ಶ್ರೀ ಮತ್ಸ್ಯಸಿರಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 3.00 | ಕಾವೇರಿ ನದಿಭಾಗ-1 -25 ಕಿ.ಮೀ.ಗಳ ನದಿಭಾಗ ಗುತ್ತಿಗೆ ಪಡೆಯಲಾಗಿದ್ದು, ಮೀನುಗಾರರಿಗೆ ಪರವಾನಗಿ ನೀಡಿ ಮೀನುಗಾರಿಕೆ ಮಾಡುತ್ತಿದ್ದಾರೆ. | | |
| 44 | ಮೈಸೂರು | ಮೈಸೂರು ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 7.23 | ಯಾವುದೇ ಕೆರೆಯನ್ನು ಗುತ್ತಿಗೆ ಪಡೆದಿರುವುದಿಲ್ಲ ಹಾಗೂ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 45 | ಮೈಸೂರು | ಮತ್ಸ್ಯಗಿರಿ ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 2.12 | ಯಾವುದೇ ಕೆರೆಯನ್ನು ಗುತ್ತಿಗೆ ಪಡೆದಿರುವುದಿಲ್ಲ ಹಾಗೂ ಕಾರ್ಯಚಟುವಟಿಕೆ ಪ್ರಾರಂಭಿಸಿರುವುದಿಲ್ಲ. | | |
| 46 | ರಾಮನಗರ | ರಾಮನಗರ ಒಳನಾಡು ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 5.8074 | ಕೆರೆಗಳನ್ನು ಗುತ್ತಿಗೆ ಪಡೆದು ಮೀನು ಹಿಡುವಳಿ ಮಾಡಲಾಗುತ್ತಿರುವುದು | | |

| ಕ್ರ.ಸಂ | ಜಿಲ್ಲೆ | ಎಫ್.ಪಿ.ಒ. ಹೆಸರು | ಸರ್ಕಾರದಿಂದ ಬಿಡುಗಡೆಯಾದ ಅನುದಾನ(ರೂ. ಲಕ್ಷಗಳಲ್ಲ) | FPOಗಳು ಕೈಗೊಂಡಿರುವ ಕಾರ್ಯಚಟುವಟಿಕೆಗಳ ವಿವರ | | |
|---|---|---|---|---|---|---|
| | | | | 1 | 2 | 3 |
| 47 | ರಾಮನಗರ | ಕನಕ ಮೀನುಗಾರಿಕೆ ಉತ್ಪಾದಕರ ಕಂಪನಿ ಲಿಮಿಟೆಡ್ | 6.3474 | ಕೆರೆಗಳನ್ನು ಗುತ್ತಿಗೆ ಪಡೆದು ಮೀನು ಹಿಡುವಳಿ ಮಾಡಲಾಗುತ್ತಿರುವುದು | | |
| 48 | ರಾಮನಗರ | ಮತ್ಸ್ಯ ಚೇತನ ಮೀನುಗಾರಿಕೆ ಉತ್ಪಾದಕರ ಕಂಪನಿ ಲಿಮಿಟೆಡ್ | 1.5114 | ಮೀನು ಆಹಾರ ಮಾರಾಟ ಕೈಗೊಂಡಿರುತ್ತಾರೆ. | | |
| 49 | ಶಿವಮೊಗ್ಗ | ಭದ್ರಾವತಿ ಮೀನುಗಾರಿಕೆ ಉತ್ಪಾದಕರ ಕಂಪನಿ ಲಿಮಿಟೆಡ್ | 6.0924 | ಅಗಸಾಲೆ ಕೆರೆಯಲ್ಲಿ ಮೀನುಕೃಷಿ | ಮೀನುಕೃಷಿ ಹಾಗೂ ಮೀನು ಮಾರಾಟ | |
| 50 | ಶಿವಮೊಗ್ಗ | ಶಿವಮೊಗ್ಗ ಮೀನುಗಾರಿಕೆ ಉತ್ಪಾದಕರ ಕಂಪನಿ ಲಿಮಿಟೆಡ್ | 6.0924 | ಪುರಲೆ ದೊಡ್ಡಕೆರೆಯಲ್ಲಿ ಮೀನುಕೃಷಿ | ಮೀನುಕೃಷಿ ಹಾಗೂ ಮೀನು ಮಾರಾಟ | |
| 51 | ಶಿವಮೊಗ್ಗ | ಮತ್ಸ್ಯತುಂಗಾ ಮೀನುಗಾರಿಕೆ ಉತ್ಪಾದಕರ ಕಂಪನಿ ಲಿಮಿಟೆಡ್ | 6.0924 | ಸಾಲುರೂ ಗ್ರಾಮ ಪಂಚಾಯಿತಿ ಕೆರೆಯಲ್ಲಿ ಮೀನುಕೃಷಿ | ತಾಜಾ ಮೀನು ಮಾರಾಟ | |
| 52 | ತುಮಕೂರು | ಗುಬ್ಬಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 10.5224 | ಗುಬ್ಬಿ ತಾಲ್ಲೂಕು ಪುರದಕೆರೆ ಮತ್ತು ಮೂಕನಹಳ್ಳಿ ಪಟ್ಟಣ ಅಮಾನಿಕೆರೆಗಳ ಮೀ.ಪಾ.ಹಕ್ಕನ್ನು 2022-23 ರಿಂದ 2026-27ರವರೆಗೆ ಗುತ್ತಿಗೆಗೆ ನೀಡಲಾಗಿದ್ದು,ಸದರಿ ಕೆರೆಗಳಲ್ಲಿ ಮೀನು ಹಿಡುವಳಿ, ಮಾರಾಟ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. | | |
| 53 | ತುಮಕೂರು | ಮತ್ಸ್ಯಲೋಕ ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 10.5224 | ತುರುವೇಕೆರೆ ತಾಲ್ಲೂಕು ಕೊಂಡಜ್ಜಿಕೆರೆ ಮೀ.ಪಾ.ಹಕ್ಕನ್ನು 2022-23 ರಿಂದ 2026-27ರವರೆಗೆ ಮತ್ತು ಬಾಣಸಂದ್ರ ಬೊಮ್ಮೇನಹಳ್ಳಿ ಕೆರೆ ಮೀ.ಪಾ.ಹಕ್ಕನ್ನು 2023-24 ರಿಂದ 2027-28ರವರೆಗೆ ಗುತ್ತಿಗೆಗೆ ನೀಡಲಾಗಿದ್ದು, ಸದರಿ ಕೆರೆಗಳಲ್ಲಿ ಮೀನು ಹಿಡುವಳಿಯಿಂದ ಬಂದ ಆದಾಯದಿಂದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. | | |
| 54 | ತುಮಕೂರು | ರುಮಾರಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 10.5224 | ಪಾವಗಡ ತಾಲ್ಲೂಕು ಕನ್ನಮೇಡಿ ವಡಸಲಮ್ಮಕೆರೆ ಮತ್ತು ಬ್ಯಾಡನೂರು ಶಂಕರಲಿಂಗಕೆರೆಗಳ ಮೀ.ಪಾ.ಹಕ್ಕನ್ನು 2022-23 ರಿಂದ 2026-27ರವರೆಗೆ ಗುತ್ತಿಗೆಗೆ ನೀಡಲಾಗಿದ್ದು, ಸದರಿ ಕೆರೆಗಳಲ್ಲಿ ಮೀನು ಹಿಡುವಳಿ, ಮಾರಾಟ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. | | |
| 55 | ಉಡುಪಿ | ಮಲ್ಪೆ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 9.5244 | ಮೌಲ್ಯ ವರ್ದಿತ, ಸಂಸ್ಕರಿತ ಮೀನಿನ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ, | ಪಚ್ಚಿಲೆ ಕೃಷಿಯನ್ನು ಮಾಡಲಾಗುತ್ತಿದೆ. | ಇತರೆ ಸಿದ್ಧಪಡಿಸಿದ ಆಹಾರದ ಮಾರಾಟ |
| 56 | ಉಡುಪಿ | ಕುಂದಾಪುರ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 9.6794 | ಏಡಿಗಳನ್ನು ಖರೀದಿಸಿ ಸ್ಟೀಮ್ ಮಾಡಿ ಮಾರಾಟ ಮಾಡುವುದು | | |

| ಕ್ರ.ಸಂ | ಜಿಲ್ಲೆ | ಎಫ್.ಪಿ.ಒ. ಹೆಸರು | ಸರ್ಕಾರದಿಂದ ಬಿಡುಗಡೆಯಾದ ಅನುದಾನ(ರೂ. ಲಕ್ಷಗಳಲ್ಲಿ) | FPOಗಳು ಕೈಗೊಂಡಿರುವ ಕಾರ್ಯಚಟುವಟಿಕೆಗಳ ವಿವರ | | |
|---|---|---|---|---|---|---|
| | | | | 1 | 2 | 3 |
| 57 | ಉಡುಪಿ | ಉಡುಪಿ ಕಿನಾರ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 9.5244 | ಮೌಲ್ಯ ವರ್ಧಿತ, ಸಂಸ್ಕರಿತ ಮೀನಿನ ಉತ್ಪನ್ನಗಳ ತಯಾರಿಕೆ ಮತ್ತು ಉಡುಪಿ ಕಿನಾರ ಬ್ರಾಂಡ್ ಅಡಿಯಲ್ಲಿ ಮಾರಾಟ | ಪಚ್ಚಿಲೆ ಕೃಷಿಯನ್ನು ಮಾಡಲಾಗುತ್ತಿದೆ. | ಇತರೆ ಸಿದ್ಧಪಡಿಸಿದ ಆಹಾರದ ಮಾರಾಟ |
| 58 | ಉಡುಪಿ | ಮತ್ಸ್ಯ ಸಂಜೀವಿನಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 9.5244 | ಲೈಫ್ ಜಾಕೆಟ್, ಬಲೆ ಮತ್ತು ಮೀನುಗಾರಿಕೆಗೆ ಸಂಬಂಧಿಸಿದ ವಸ್ತುಗಳ ಮಾರಾಟ | | |
| 59 | ಉತ್ತರಕನ್ನಡ | ಸೀ ಬರ್ಡ್ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 5.1774 | ಒಣ ಮೀನು, ನೀಮ್ ಕೇಕ್ ಮತ್ತು ಅಡಿಕೆ ಮಾರಾಟ ಮಾಡುತ್ತಾರೆ | | ಮೀನು ಸಂರಕ್ಷಣೆ ಮಾಡುತ್ತಾರೆ. |
| 60 | ಉತ್ತರಕನ್ನಡ | ಸೀ ವೀಲ್ ಉತ್ಪಾದಕರ ಕಂಪನಿ ಲಿಮಿಟೆಡ್ | 5.1774 | ಮೀನು ಮರಿ , ಬಲೆಗಳ ಮತ್ತು ಮೀನು ಆಹಾರ ಮಾರಾಟ | ಪಂಜರ ಕೃಷಿಗೆ ಮಾರ್ಗದರ್ಶನ ಮತ್ತು ಪ್ರೋತ್ಸಾಹ | |
| 61 | ಉತ್ತರಕನ್ನಡ | ಭಟ್ಕಳ ಓಷನ್ ಉತ್ಪಾದಕರ ಕಂಪನಿ ಲಿಮಿಟೆಡ್ | 5.1774 | ಒಣ ಮೀನು ಮತ್ತು ಟಾರ್ಪಲ್ ಗಳನ್ನು ಮಾರಾಟ ಮಾಡುತ್ತಾರೆ. | ಕೊಬ್ಬರಿ ಎಣ್ಣೆ ಮತ್ತು ಮೀನು ಮಾರಾಟ | ಮೀನಿನ ಗೊಬ್ಬರ ತಯಾರಿಕೆ |
| 62 | ಯಾದಗಿರಿ | ಮಾತ ಮಾನಿಕೇಶ್ವರಿ ಮೀನು ರೈತ ಉತ್ಪಾದಕರ ಕಂಪನಿ ಲಿಮಿಟೆಡ್ | 10.0924 | ಭತ್ತದ ಬೆಳೆಗೆ ಪರ್ಯಾಯವಾಗಿ ಮೀನು ಚಟುವಟಿಕೆಗಳನ್ನು ಮಾಡಲಾಗುತ್ತಿದೆ | ಹತ್ತಿಕುಣಿ ಜಲಾಶಯದಿಂದ ಮೀನು ಸಾಕಾಣಿಕೆ ಮತ್ತು ಮಾರಾಟ | |
| | ಒಟ್ಟು | | **464.788** | | | |

***

## ಅನುಬಂಧ – 04

**ಪ್ರಶ್ನೆ ಸಂಖ್ಯೆ 743**

## ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು ಈ ಕೆಳಕಂಡ ಮೀನುಗಾರಿಕೆ ಚಟುವಟಿಕೆಗಳಿಗೆ ವಿತರಿಸಲಾಗುತ್ತಿದೆ

ಕೇಂದ್ರ ಸರಕಾರ 2018-19ನೇ ಸಾಲಿನ ಆಯವ್ಯಯದಲ್ಲಿ ಮೀನು ಕೃಷಿಕರಿಗೆ ತಮ್ಮ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಬಂಡವಾಳದ ಅಗತ್ಯತೆಗಳನ್ನು ಪೂರೈಸಲು ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಸೌಲಭ್ಯವನ್ನು ವಿಸ್ತರಿಸುವುದಾಗಿ ಘೋಷಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್ ಬಿಐ) ಸುತ್ತೋಲೆ ಸಂಖ್ಯೆ: ಆರ್ ಬಿಐ/2018-19/112/ಎಫ್.ಐ.ಡಿ. ಸಿ.ಒ. ಎಫ್ ಎಸ್ ಡಿ . ದಿನಾಂಕ 04/02/2020 ರಂದು ಬಿಸಿ12/05.05.10/2018-19 ಮೀನು ಕೃಷಿಕರಿಗೆ ತಮ್ಮ ಬಂಡವಾಳದ ಅಗತ್ಯವನ್ನು ಪೂರೈಸಲು ಕೆಸಿಸಿ ಸೌಲಭ್ಯವನ್ನು ವಿಸ್ತರಿಸಲು ದಿನಾಂಕ: 04-02-2020 ರಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಿದೆ. ಇದಲ್ಲದೆ, ದಿನಾಂಕ:17-06-2020 ರಂದು ಮತ್ತು ಆನಂತರ ನಡೆದ ಸಭೆಗಳಲ್ಲಿ, ಬ್ಯಾಂಕರ್ ಗಳೊಂದಿಗೆ ವಿವರವಾದ ಚರ್ಚೆಗಳನ್ನು ನಡೆಸಿದ ನಂತರ ಹಣಕಾಸು ನೀಡುವ ಪ್ರಮಾಣವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**1.** ಮೀನು ಸಾಕಾಣಿಕೆ:

a) ಒಳನಾಡು ಮೀನು ಕೃಷಿ - ಪ್ರತಿ ಎಕರೆಗೆ ರೂ. 2,00,000/-.
b) ಪಂಜರ ಕೃಷಿ (ಕೇಜ್ ಕಲ್ಚರ್) (6mx4m) - ಒಂದು ಬೆಳೆಗೆ ರೂ. 1,00,000/-.
c) ಪಚ್ಚಿಲೆ ಕೃಷಿ (Rack and rope system) - ಪ್ರತಿ ರಾಕ್ ಗೆ ರೂ. 5000/- (ಪ್ರತಿ ಬೆಳೆ ಹಾಗೂ ಪ್ರತಿ ವರ್ಷಕ್ಕೆ)
d) ಹಿನ್ನೀರಿನಲ್ಲಿ ಸಿಗಡಿ ಕೃಷಿ - ಎಕರೆಗೆ ರೂ. 2,80,000/-(ಒಂದು ಬೆಳೆಗೆ 5 ತಿಂಗಳು).
e) RAS ಪದ್ಧತಿಯ ಮೀನು ಸಾಕಣೆ - ರೂ. 3,00,000/- (100m3 ಸಾಮರ್ಥ್ಯದಲ್ಲಿ ಒಂದು ಬೆಳೆಗೆ 2 ಟನ್ ಮೀನು ಉತ್ಪಾದನೆ ಮಾಡಲು).
f) ಬಯೋ-ಫ್ಲಾಕ್ ಮಾದರಿ ಮೀನು ಉತ್ಪಾದನೆ - ರೂ. 3,00,000/- (100m3 ಸಾಮರ್ಥ್ಯದಲ್ಲಿ ಒಂದು ಬೆಳೆಗೆ 2 ಟನ್ ಮೀನು ಉತ್ಪಾದನೆ ಮಾಡಲು)
g) ಒಳನಾಡು ಕೊಳಗಳಲ್ಲಿ ಮೀನುಗಾರಿಕೆ ಚಟುವಟಿಕೆ - ರೂ. 2,000/-

**2.** ಕಡಲ ಮೀನುಗಾರಿಕೆ:

a. ಸಮುದ್ರ ಮೀನುಗಾರಿಕೆ (15x20ಮೀ) - 15 ದಿನಗಳ ಒಂದು ಟ್ರಿಪ್ ಗೆ ರೂ. 3,30,000/-
b. ಸಮುದ್ರ ಮೀನುಗಾರಿಕೆ (10x15ಮೀ) - 5 ರಿಂದ 6 ದಿನಗಳ ಒಂದು ಟ್ರಿಪ್ ಗೆ ರೂ.1,25,000/-
c. ಮೋಟರೈಸಡ್ ಬೋಟ್ ವೆಚ್ಚ - ದಿನಕ್ಕೆ ರೂ. 3,500/-
d. ಸಾಂಪ್ರದಾಯಿಕ ದೋಣಿ ವೆಚ್ಚ - ದಿನಕ್ಕೆ ರೂ. 500/-
e. ಕಡಲ ಮೀನುಗಾರಿಕೆ ದೋಣಿ(10 ಮೀಟರ್ ಗಿಂತ ಕಡಿಮೆ ಉದ್ದದ) 10 ದಿನದ ಟ್ರಿಪ್ ಗಾಗಿ – ರೂ. 2,00,000/-
f. ನದಿ/ಕೆರೆ/ಜಲಾಶಯದ ಮೀನುಗಾರಿಕೆ ಪರವಾನಗಿಯನ್ನು ಹೊಂದಿರುವ ಮೀನುಗಾರರಿಗೆ – ರೂ. 20,000/- ಪ್ರತಿ ಪರವಾನಗಿಗೆ.

ಇದಲ್ಲದೆ, ಮೀನುಗಾರಿಕೆಗಾಗಿ ಕೆಸಿಸಿ ಯನ್ನು ವಿತರಿಸುವ ಬಗ್ಗೆ ಆರ್ ಬಿ ಐ ಮಾರ್ಗದರ್ಶಿ ಸೂತ್ರಗಳು (Circular of RBI No.FIDD.CO.FSD.BC-12/05.05.010/2018-19 Dated: 04-02-2019) ಈ ಕೆಳಗಿನಂತಿವೆ:

3.1 ಮೀನುಗಾರಿಕೆ

3.1.1 ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ.

3.1.1.1 ಮೀನುಗಾರಿಕೆ, ಮೀನು ರೈತರು (ವೈಯಕ್ತಿಕ & ಗುಂಪುಗಳು/ ಪಾಲುದಾರರು/ ಹಂಚಿಕೆ ಬೆಳೆಗಾರರು/ಗೇಣಿದಾರ ರೈತರು), ಸ್ವಸಹಾಯ ಗುಂಪುಗಳು, ಜಂಟಿ ಹೊಣೆಗಾರಿಕೆ ಗುಂಪುಗಳು ಮತ್ತು ಮಹಿಳೆಯರು.

3.1.1.2 ಫಲಾನುಭವಿಗಳು ಮೀನು ಕೃಷಿಗೆ ಸಂಬಂಧಿಸಿದ ಯಾವುದೇ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಾದ ಕೊಳ, ಕೆರೆ, ತೆರೆದ ನೀರಿನ ಮೂಲಗಳು, ರೇಸ್ ವೇ, ಹ್ಯಾಚರಿ, ಮೀನು ಸಾಕಣೆ ಘಟಕ, ಮೀನು ಕೃಷಿ ಮತ್ತು ಮೀನುಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಅಗತ್ಯ ಪರವಾನಗಿ ಹೊಂದಿರಬೇಕು ಮತ್ತು ರಾಜ್ಯದ ಯಾವುದೇ ನಿರ್ದಿಷ್ಟ ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಹೊಂದಿರುವವರು.

3.1.2.1 ಸಮುದ್ರ ಮೀನುಗಾರಿಕೆ

2.1.1.1.1ರಲ್ಲಿ ಪಟ್ಟಿ ಮಾಡಲಾದ ಫಲಾನುಭವಿಗಳು. ಮೇಲೆ, ನೋಂದಾಯಿತ ಮೀನುಗಾರಿಕಾ ದೋಣಿ/ದೋಣಿಯನ್ನು ಹೊಂದಿರುವ, ಮೀನುಗಾರರು ಮತ್ತು ಸಮುದ್ರದಲ್ಲಿ ಮೀನುಗಾರಿಕೆಗಾಗಿ ಅಗತ್ಯ ಮೀನುಗಾರಿಕೆ ಪರವಾನಗಿ/ಅನುಮತಿ, ಸಮುದ್ರ ಮತ್ತು ತೆರೆದ ಸಮುದ್ರ ಮತ್ತು ಇತರೆ ರಾಜ್ಯದ ಯಾವುದೇ ನಿರ್ದಿಷ್ಟ ಮೀನುಗಾರಿಕೆ ಮತ್ತು ಚಟುವಟಿಕೆಗಳನ್ನು ಹೊಂದಿರುವವರು.

***

ಅನುಬಂಧ- 05

ಪ್ರಶ್ನೆ ಸಂಖ್ಯೆ 743

## ವಿದ್ಯಾನಿಧಿ ಯೋಜನೆಯಡಿ ಶಿಷ್ಯವೇತನ ನೀಡಿರುವ ಜಿಲ್ಲಾವಾರು ಮಾಹಿತಿ

| ಕ್ರ.ಸಂ | ಜಿಲ್ಲೆ | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 5 |
| 2 | ಬಳ್ಳಾರಿ | 5 |
| 3 | ಬೆಂಗಳೂರು ಗ್ರಾಮಾಂತರ | 1 |
| 4 | ಬೆಂಗಳೂರು ನಗರ | 36 |
| 5 | ಚಾಮರಾಜನಗರ | 9 |
| 6 | ಚಿಕ್ಕಬಳ್ಳಾಪುರ | 1 |
| 7 | ಚಿಕ್ಕಮಗಳೂರು | 3 |
| 8 | ಚಿತ್ರದುರ್ಗ | 5 |
| 9 | ದಕ್ಷಿಣ ಕನ್ನಡ | 142 |
| 10 | ದಾವಣಗೆರೆ | 11 |
| 11 | ಧಾರವಾಡ | 5 |
| 12 | ಹಾಸನ | 14 |
| 13 | ಹಾವೇರಿ | 2 |
| 14 | ಕಲಬುರಗಿ | 7 |
| 15 | ಕೊಡಗು | 3 |
| 16 | ಕೋಲಾರ | 2 |
| 17 | ಕೊಪ್ಪಳ | 6 |
| 18 | ಮಂಡ್ಯ | 12 |
| 19 | ಮೈಸೂರು | 18 |
| 20 | ರಾಯಚೂರು | 3 |
| 21 | ರಾಮನಗರ | 1 |
| 22 | ಶಿವಮೊಗ್ಗ | 27 |
| 23 | ತುಮಕೂರು | 15 |
| 24 | ಉಡುಪಿ | 303 |
| 25 | ಉತ್ತರ ಕನ್ನಡ | 209 |
| 26 | ವಿಜಯನಗರ | 6 |
| 27 | ವಿಜಯಪುರ | 3 |
| 28 | ಯಾದಗಿರಿ | 4 |
|  | ಒಟ್ಟು | 858 |

***